1990ರಿಂದ ಇದುವರೆಗೂ ಆಗಿರುವಂಥ ಎಲ್ಲಾ ಮಾಹಿತಿಗಳನ್ನು ಸನ್ಮಾನ್ಯ ಸದಸ್ಯರಿಗೆ ನಾನು ಕೊಟ್ಟಿದ್ದೇನೆ. ಇನ್ನು ಎಂಟು ಕೇಸಗಳಲ್ಲಿ ಛಾರ್ಜ ಸೀಟ್ ಎನಕ್ವರಿಯ ಸ್ಟೇಜ್‌ನಲ್ಲಿದೆ ಎನ್ನುವಂಥಾದ್ದನ್ನು ಹೇಳಿ, ಅವರು ಹೇಳಿದಂತಹ ಎರಡು ಸ್ಪೆಸಿಫಿಕ್ ಕೇಸ್‌ಗಳು ಏನಿದೆ ಅದರ ಬಗ್ಗೆ ಖಚಿತವಾದ ಮಾಹಿತಿ ನನ್ನ ಹತ್ತಿರವಿಲ್ಲ. ಈ ಕೇಸಗಳ ಬಗ್ಗೆ ಡಿಟೈಲಗಳನ್ನು ಗೌರವಾನ್ವಿತ ಸದಸ್ಯರಿಗೆ ತರಿಸಿ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಿ.ಆರ್. ಲಕ್ಷ್ಮಯ್ಯನವರ ಪ್ರಶ್ನೆ : 89: (1592)ನ್ನು ತಡೆ ಹಿಡಿದಿದ್ದೇನೆ. ದಿನಾಂಕ : 11ನೇ ಆಗಸ್ಟ 1995ರಂದು ಉಪಾವೇಶನವಿಲ್ಲದೆ ಇದ್ದ ಕಾರಣ ಆ ದಿನಕ್ಕೆ ಗೊತ್ತುಪಡಿಸಿದ್ದ ಸದನದಲ್ಲಿ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿನ 27 ಪ್ರಶ್ನೆಗಳ ಪೈಕಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ದಿನಾಂಕ 21ನೇ ಆಗಸ್ಟ 1995ರ ಪ್ರಶ್ನೋತ್ತರ ನಡೆಯದ ಕಾರಣ ಆ ದಿನದ 5ನೇ ಪಟ್ಟಿಯಲ್ಲಿದ್ದ ಚುಕ್ಕೆ ಗುರುತಿನ 15 ಪ್ರಶ್ನೆಗಳನ್ನು ಚುಕ್ಕೆ ಗುರುತಿಲ್ಲದ 68 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶಿಗ್ಗಾಂವ್ - ಸವಣೂರು ನೀರಿನ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಭೂಸ್ವಾಧೀನ ಪಡಿಸಿಕೊಂಡು ಜಮೀನುಗಳಿಗೆ ಪರಿಹಾರ.

47 - ಶ್ರೀ ಮಂಜುನಾಥ. ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಸವಣೂರು, ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಕೆ.ಯು.ಡಬ್ಲೂ.ಎಸ್. ಇಲಾಖೆಯ ವತಿಯಿಂದ ನಾಗನೂರು ಕೆರೆ ಆಳ ಮಾಡಲು ಎಷ್ಟು ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ?

ಆ) ಸದರಿ ಜಮೀನು ಭೂ ಸ್ವಾಧೀನ ಪಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ನೋಟೀಸು ಕೊಡಲಾಗಿದೆಯೇ?

ಇ) ಇಲ್ಲವಾದರೆ ನೋಟೀಸ್ ನೀಡಲು ಆದ ವಿಳಂಬಕ್ಕೆ ಕಾರಣಗಳೇನು?

ಈ) ಸಂಬಂಧಪಟ್ಟವರಿಗೆ ಭೂ ಪರಿಹಾರ ಕೊಡಲಾಗಿದೆಯೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ) :

ಅ) 6 ಎಕರೆ 36 ಗುಂಟೆ ಮೀನನನ್ನು ಸ್ವಾಧೀನ ಪಡಿಸಿಕೊಳ್ಳಲು ಉಪವಿಭಾಗಾಧಿಕಾರಿಗಳು (ಸಾವನೂರು) 4 (1) ಅಧಿಸೂಚನೆ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಆ) ಇಲ್ಲ.

ಇ) ಮಂಡಲಿಯಲ್ಲಿ ಹಣದ ಕೊರತೆ ಇದ್ದಿದ್ದರಿಂದ ಉಪವಿಭಾಗಾಧಿಕಾರಿರವರಿಗೆ ಮಂಡಲಿಯು ಹಣ ಪಾವತಿ ಮಾಡಲು ವಿಳಂಬ ಆಗಿದೆ.

ಈ) ಒಟ್ಟು ಭೂ ಪರಿಹಾರ ಮೊತ್ತ ರೂ. 23.35.406. ರೂ,ಗಳಲ್ಲಿ ಅರ್ಧಮೊತ್ತವಾದ 11,97,743.00 ರೂ.ಗಳನ್ನು ಉಪವಿಭಾಗಧಿಕಾರಿ, ಸವಣೂರು ಇವರಿಗೆ ದಿನಾಂಕ: 22.05.1990 ರಂದು ಪಾವತಿ ಮಾಡಲಾಗಿದೆ. ಉಳಿದ ಮೊತ್ತವನ್ನು ಉಪವಿಭಾಗಾಧಿಕಾರಗಳಿಂದ ಬೇಡಿಕೆ ಬಂದ ನಂತರ ಪಾವತಿ ಮಾಡಲಾಗುವುದು.

ರಾಜ್ಯದಲ್ಲಿ ಗ್ರಾನೈಟ್ ಲೂಟಿ

48 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾನೈಟ್ ಲೂಟಿ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಎಷ್ಟು ಕಡೆ ಅಕ್ರಮ ಗ್ರಾನೈಟಗಳನ್ನು ವಶಪಡಿಸಿಕೊಳ್ಳಲಾಗಿದೆ?

ಇ) ನಿಸರ್ಗವನ್ನು ಉಳಿಸುವ ದೃಷ್ಟಿಯಿಂದ ಗ್ರಾನೈಟ್ ತೆಗೆಯುವುದನ್ನು ಸಂಪೂರ್ಣವಾಗಿ ಸರ್ಕಾರ ನಿಲ್ಲಿಸಲು ತೀರ್ಮಾನಿಸುತ್ತಿದ್ದೆಯೇ?

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಕಲ್ಲು ಗಣಿ ಗುತ್ತಿಗೆ ಪ್ರದೇಶಗಳ ಅನಿರೀಕ್ಷಿತ ತಪಾಸಣೆ.

2) ತನಿಖಾ ಠಾಣೆಗಳ ಸ್ಥಾಪನೆ.

3) ತನಿಖಾ ಪಡೆಗಳ ನೇಮಕ

4) ಸಾಗಣೆ ಪರವಾನಗಿ ನೀಡುವಾಗ ಕಡ್ಡಾಯ ಬ್ಲಾಕುಗಳ ತಪಾಸಣೆ.

5) ಪರವಾನಗಿ ಇಲ್ಲದೆ ಸಾಗಿರುವ ಗ್ರಾನೈಟ್ ದಿಮ್ಮಿಗಳನ್ನು ತನಿಖಾ ಪಡೆಗಳಿಂದ ಮುಟ್ಟುಗೋಲು ಹಾಕಿಸುವುದು.

ಆ) ರಾಜ್ಯದ ಹದಿಮೂರು ಸ್ಥಳಗಳಲ್ಲಿ ಅನಧಿಕೃತವಾಗಿ ತೆಗೆದ ಕಲ್ಲು ದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇ) ಸರ್ಕಾರವು ಸಂಪೂರ್ಣವಾಗಿ ಕಲ್ಲುಗಣಿಗಾರಿಕೆ ನಿಲ್ಲಿಸಲು ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಕ.ಉ.ಖ.ರಿ.ನಿ. 1995 (ತಿದ್ದುಪಡಿ) ನಿಯಮ 18 ರಂತೆ ನಿಸರ್ಗವನ್ನು ಉಳಿಸುವ ದೃಷ್ಟಿಯಿಂದ ಅರ್ಜಿದಾರರಿಂದ ವ್ಯವಸ್ಥಿತವಾದ ಕಲ್ಲುಗಣಿಗಾರಿಕೆಯ ಯೋಜನಾ ನಕ್ಷೆಯನ್ನು ಪಡೆಯಲಾಗುತ್ತಿದೆ. ಸದರಿ ಯೋಜನಾ ನಕ್ಷೆಯಲ್ಲಿ ಕಲ್ಲುಗಣಿಗಾರಿಕೆಯಿಂದ ನಿಸರ್ಗದ ಮೇಲೆ ಆಗುವ ಪ್ರಭಾವ ಹಾಗೂ ನಿಸರ್ಗವನ್ನು ಉಳಿಸಿಕೊಳ್ಳುವ ಸಲುವಾಗಿ ಉದ್ದೇಶಿಸಿರುವ ಕ್ರಮಗಳ ಬಗ್ಗೆ ಪಟ್ಟಿಯನ್ನು ನೀಡಬೇಕೆನ್ನುವ ಷರತ್ತನ್ನು ಸೇರಿಸಿಕೊಳ್ಳಲಾಗಿದೆ.